# ಬಯಲಾಲಯದೊಳಗೆ

'ವಲಸೆ' ಎಂಬ ಅರ್ಥವನ್ನು ಹೇಳುವ 'ಡಯಾಸ್ಪೋರಾ' **Diaspora** ಎಂಬ ಆಂಗ್ಲಪದವನ್ನು ಇಂಗ್ಲಿಷ್ ಬಳಸುವ ಕನ್ನಡಿಗರೂ ಹೆಚ್ಚು ಕೇಳಿಲ್ಲ, ಅಥವಾ ಬಳಸುವುದಿಲ್ಲ. **Nostalgia** ಎಂಬ ಪದವನ್ನು ಧಾರಾಳ ಬಳಸುವೆವು. **Nostalgia** ಎಂದರೆ ಎಲ್ಲರಿಗೆ ಗೊತ್ತು. ಸರಳವಾಗಿ ಅದು **Home- Sickness** ಬಿಟ್ಟು ಬಂದ ಮನೆಯ ನೆನಪು– ಬಿಟ್ಟು ಬಂದುದೆಲ್ಲದರ ನೆನಪು ಗಾಢವಾಗಿ ಮನಸ್ಸನ್ನು ಕಾಡುತ್ತಿರುವ ಒಳ ಅವಸ್ಥೆ **Nostalgia** ಈ ನಾಸ್ಟಾಲ್ಜಿಯಾ ಎಂಬ ಪದ ಡಯಾಸ್ಪೋರಾದ ವಿರುದ್ಧ ಪದ ಎನ್ನಲಾಗಿದೆ. ಅಂದಾಗ ಡಯಾಸ್ಪೋರಾ ಯಾವುದನ್ನು ಸೂಚಿಸುತ್ತದೆ. ಎನ್ನುವುದು ಸ್ಪಷ್ಟವಾಗಬಹುದು.

ಅದು ಒಂದು ರೀತಿ ಹಂಗು ಹರಿದು ಮುನ್ನುಗ್ಗುವುದನ್ನು, ದೇಶ ವಿದೇಶಗಳೆನ್ನದೆ ಎಲ್ಲಿಯಾದರೂ ಸುಖ ಜೀವನ ನಡೆಸುವ ಸಾಧ್ಯತೆ ಇರುವಲ್ಲಿ ನೆಲೆ ಕಂಡುಕೊಳ್ಳುವ ತವಕ ಮತ್ತು ಧೈರ್ಯವನ್ನು ಅವಕಾಶಗಳನ್ನು ಅರಸುವ ಸೂಕ್ಷ್ಮವನ್ನು, ಅವಕಾಶಗಳನ್ನು ಸೃಷ್ಟಿ ಮಾಡಿಕೊಳ್ಳುವ ಮೇಧಾವಿ ತನವನ್ನು, ಹೊಸ ಪರಿಸರ, ಹೊಸ ಪರಿಸ್ಥಿತಿ, ಹೊಸಭಾಷೆಗಳಿಗೆ ಹೊಂದಿಕೊಳ್ಳುವ ನಮನೀಯತೆಯನ್ನು, ಬದುಕನ್ನು ಬಗೆಯುವ, **Explore** ಧೈರ್ಯವನ್ನು, ಹೊಸ ಎಚ್ಚರವನ್ನೇ ಪಡೆಯಬೇಕೆನ್ನುವ ದಾಹವನ್ನು ತಮ್ಮದೇ ಬದುಕನ್ನು ಕಟ್ಟಿಕೊಳ್ಳಬೇಕೆನ್ನುವ ಹುಮ್ಮಸವನ್ನು, ಇವೆಲ್ಲವನ್ನೂ ಸೂಚಿಸುತ್ತದೆ ಎನ್ನಬಹುದು. ಶಬ್ದಕೋಶಗಳಲ್ಲಿ ಈ ಅರ್ಥಗಳೆಲ್ಲ ಇಲ್ಲ. ಆದರೆ ನಾಸ್ಟಾಲ್ಜಿಯಾಕ್ಕೆ ವಿರುದ್ಧ ಪದ ಎಂದಿರುವುದರಿಂದ ಹೀಗೆ ಅರ್ಥಗಳನ್ನು ಸೂಚಿಸಬಹುದಾಗಿದೆ.

ವಿರುದ್ ಧಪದ ಎನ್ನುತ್ತೇವೆ. ಭಾಷಾರೂಢಿಯಲ್ಲೇನೋ ಇದು ಸರಿ. ಆದರೆ ನಿಜಕ್ಕೂ ವಿರುದ್ಧ ಪದವೆ? ಬಯಲು, ಆಲಯ ಎನ್ನುವ ಪದಗಳು ಪರಸ್ಪರ ವಿರುದ್ಧ ಪದಗಳು ಎನ್ನುತ್ತೇವೆ. ಮೇಲ್ನೋಟಕ್ಕೆ ವಿರುದ್ಧ ಹೌದು. ಆದರೆ ನಿಜಕ್ಕೂ ವಿರುದ್ಧವೆ? ಬಯಲು ಇಲ್ಲದೆ ಆಲಯವಿರುವುದು ಸಾಧ್ಯವೆ? ಆಲಯದ ಒಳಗೂ ಇರುವುದು ಬಯಲೇ ಅಲ್ಲವೆ? 'ಬಯಲು'ಯಾವುದಕ್ಕಾದರೂ ವಿರೋಧಿಯಾಗುವುದು ಸಾಧ್ಯವೆ? ಹಾಗೆಂದು 'ಆಲಯ'ವಿಲ್ಲದೆ ಆಲಯದ ಒಳಗೂ ಹೊರಗೂ ಇರುವುದು, ತುಂಬಿರುವುದು ಬಯಲು ಎನ್ನುವ ಅನುಭವವಾಗುವುದು ಹೇಗೆ? ಹೀಗೆ ಮೇಲ್ನೋಟಕ್ಕೆ ವಿರೋಧದಂತೆ ಕಾಣುವ, ಆದರೆ ಸೃಷ್ಟಿಶೀಲವಾಗಿ ನೋಡಿದರೆ ಪರಸ್ಪರ ಒಳಗೊಳ್ಳುವಂತಿರುವ ಪರಿಕಲ್ಪನೆಗಳಿವು. ಹಾಗೆಯೇ 'ನೊಸ್ಟಾಲ್ಜಿಯಾ' ಮತ್ತು 'ಡಯೋಸ್ಪೋರಾ' ಎಂಬ ಪರಿಭಾಷೆಗಳು ಕೂಡಾ.

ಪ್ರಾಚೀನ ಮಾನವ ಅಲೆಮಾರಿಯಾಗಿದ್ದನೆನ್ನುತ್ತಾರೆ. ಭಾರತೀಯರ ಚತುರ್ಯುಗಗಳ ಕಲ್ಪನೆಯಲ್ಲಿ 'ಕೃತಯುಗ' ಮೊದಲನೆಯದು. ಕೃತಯುಗದ ಲಕ್ಷಣಗಳನ್ನು ಹೇಳುವಾಗ 'ಕೃತಃ ಸಂಪದ್ಯತೇ ಚರನ್' ಎನ್ನಲಾಗಿದೆ. ಅಂದರೆ ನಡದಾಡುವವನಿಗೆ, ಚರಂತಿ ಜೀವಕ್ಕೆ, ಜಂಗಮ ಮನೋಧರ್ಮಕ್ಕೆ ಕೃತಯುಗ ಸೇರಿದ್ದು ಎಂದರ್ಥ. ನಿಶ್ಚಲತೆಗಲ್ಲ–ಚಲನೆಗೆ, ಚಲನೆಯ ಜಂಗಮ ಜೀವಂತಿಕೆಗೆ ಮೊದಲ ಯುಗಲಬ್ಧ ಎನ್ನುವ ಮಾತು, ಅಲೆಮಾರಿ ತನವೇ ಮಾನವನ ಪ್ರಾಚೀನ ಲಕ್ಷಣ ಎನ್ನುವ ಮಾತಿಗೆ ಸಂವಾದಿಯಾಗಿದೆ. ಹಾಗೆಯೇ, ಕೃತಯುಗದಲ್ಲಿ ನಾಲ್ಕು ಪಾದಗಳಲ್ಲೂ ಧರ್ಮವು ನೆಲಸಿತ್ತೆನ್ನುವ ಮಾತು, ವಿರಾಟ್ ಪುರುಷನಿಗೆ ಸಾವಿರ ಕಾಲುಗಳು, ಸಹಸ್ರಪಾತ್, ಎನ್ನುವ ಮಾತು ಇವೆಲ್ಲವೂ ಅಲೆಮಾರಿತನವನ್ನೇ ಪರೋಕ್ಷವಾಗಿ ಸೂಚಿಸುತ್ತದೆ.

'ಅಲೆಮಾರಿತನ' ಮತ್ತು 'ವಲಸೆ'– ತುಂಬ ಹತ್ತಿರ ಇವೆ. ಇವೆರಡೂ ಒಂದೇ ಎಂದರೂ ಸರಿಯೇ. ಮನುಷ್ಯಜೀವ ಅಲೆಯುತ್ತದೆ ನಿಜ. ಹಾಗೆ ಅಲೆಯುವಾಗ ಅದು ತನ್ನೊಡನೆ ಏನನ್ನು ಒಯ್ಯುತ್ತದೆ? ಯಾವ ಬುತ್ತಿ? ಯಾವ ನೀರಿನ ಕಮಂಡಲ? ಯಾವ ಗಂಟು? ಯಾವೆಲ್ಲ ನೆನಪು? ತಾನು ತನ್ನ ಅಲೆತದಲ್ಲಿ ಏನೆಲ್ಲ ಕಂಡೆನೋ ಏನೆಲ್ಲ ಉಂಡೆನೋ ಆ ಕಂಡುಂಡ ನೆನಪುಗಳ ಗಂಟನ್ನೆಲ್ಲ ಆಳದಲ್ಲಿ ಹೊತ್ತುಕೊಂಡೇ ಜೀವ ಎಲ್ಲಿಂದೆಲ್ಲಿಗೆ ಒಯ್ದಾಡುತ್ತದೆ. ಸೂರ್ಯನಸುತ್ತ ತನ್ನೆಲ್ಲ ಜೀವಸಂಕುಲದೊಂದಿಗೇ ಚಲಿಸುತ್ತಲೇ ಇರುವ ಭೂಮಿಯಂತೆ!

ನೆನಪುಗಳು ಹಿಂದಕ್ಕೊಯ್ಯುತ್ತವೆ. ಬದುಕು ಮುಂದಕ್ಕೆ ಚಲಿಸುತ್ತದೆ. ಭೂಮಿಯಲ್ಲಿ ಮತ್ತೆ ಕತ್ತಲೆ ಬೆಳಕುಗಳಾಗುವಂತೆ ಈ ಪ್ರಕ್ರಿಯೆ! ಕತ್ತಲೆ ಇಲ್ಲದೆ ಬೆಳಕಿಲ್ಲ. ಬೆಳಕಿಲ್ಲದ ಕತ್ತಲೆ ಇಲ್ಲ! ಬೆಳಕಿಲ್ಲದಿರುವುದೇ ಕತ್ತಲೆಯಾದರೂ ಬೆಳಕಿಲ್ಲದೆ ಕತ್ತಲೆ ಇಲ್ಲ ಎನ್ನುವುದೇ ನಿಜ! ಭೂಮಿಯ ಚಲನೆಯಿಂದಾಗಿಯೇ ಈ ವಿಭಿನ್ನ ಅವಸ್ಥೆಗಳು. ಶ್ರಮ ಮತ್ತು ವಿಶ್ರಾಂತಿ ಎಂಬ ಅವಸ್ಥೆಗಳು. ಬೆಳಗೆಂದರೆ ಶ್ರಮ; ಕರ್ಮ. ಕತ್ತಲೆ ಎಂದರೆ ವಿಶ್ರಾಂತಿ. ವಿಶ್ರಾಂತಿಯೂ ಚಲನೆಯೇ ನಿಜ. ಆದರೆ ನಮಗೆ ಈ ಚಲನೆಯ ಅನುಭವವಾಗುವುದಿಲ್ಲ ಅಷ್ಟೆ. ಇಲ್ಲದಿದ್ದರೆ–ಕತ್ತಲೆ ಕಳೆಯಿತು ಎನ್ನುವುದು ಹೇಗೆ? 'ಕಳೆಯುವುದು' ಚಲನೆಯನ್ನೇ ಸೂಚಿಸುವ ಪದವಲ್ಲವೆ? ಹೀಗೆ– ಗತ ನೆನಪುಗಳನ್ನು ಹೊತ್ತ ಬದುಕಿನ ಚಲನೆಯನ್ನು ಗಮನಿಸಿದಾಗ, ಒಂದರಲ್ಲಿ ಇನ್ನೊಂದು ಅಡಗಿರುವುದು ತಿಳಿದು ಹೊಸತೇ ಒಂದು ಅರಿವು ಮೂಡುವುದು. ಆ ಅರಿವಿನಲ್ಲಿ ಸೃಷ್ಟಿಶೀಲ ಗುಣವಿರುವುದು!

ನಮ್ಮ ಆದಿಕವಿ ಪಂಪ, ತನ್ನ ವಿಕ್ರಮಾರ್ಜುನ ವಿಜಯದಲ್ಲಿ, ಬನವಾಸಿಯನ್ನು ನೆನೆದಿರುವುದು ಪ್ರಸಿದ್ಧವಾಗಿದೆ. 'ಆರಂಕುಶ ಮಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಶಮಂ' ಎಂಬುದು ಪಂಪನ ಮಾತು. ಯಾರು ಅಂಕುಸವಿಡುತ್ತಾರೆ ಪಂಪನಿಗೆ? ಯಾಕೆ? ಆದರೆ ಬದುಕಿನ ಪ್ರವಾಹ ಪಂಪನನ್ನು ಬನವಾಸಿಯಿಂದ ಬಹುದೂರ–ಅರಿಕೇಸರಿಯ ಆಸ್ಥಾನಕ್ಕೆ– ಒಯ್ದಿದೆ. ಆಸ್ಥಾನದ ಬದುಕೇ ಒಂದು ಅಂಕುಸವಾಗಿದೆ! ಹಾಗೆಂದು ಬನವಾಸಿಯಲ್ಲೇ ಇರುವಂತಿಲ್ಲ. ತನ್ನ ಪ್ರತಿಭೆಯನ್ನು ಒರೆಗೆಹಚ್ಚಿ ಮಾನ್ಯ ಮಾಡಬಲ್ಲ ಜಗದ್ರಂಗಕ್ಕೆ ಮನುಷ್ಯ ಜೀವ ಬರಲೇಬೇಕಿದೆ. ಅಲ್ಲಿ ನಾನಾ ರೀತಿಯಲ್ಲಿ ಸೆಣಸಾಡಲೇಬೇಕಿದೆ. ತನ್ನ ಪ್ರತಿಭೆಯನ್ನು ಪಣಕ್ಕಿಡಲೇ ಬೇಕಿದೆ ನಿಜ. ಆದರೆ ಇದಕ್ಕಾಗಿಯೇ ತನ್ನ ಪ್ರತಿಭೆಯ ಮೂಲವನ್ನು ಮತ್ತೆ ಮತ್ತೆ ನೆನೆಯುತ್ತಲೇ ಇರಬೇಕಾಗುತ್ತದೆ! ಪ್ರತಿಭೆಯನ್ನು ಮತ್ತೆ ಮತ್ತೆ ಜೀವಂತಗೊಳಿಸುವ ಉಪಾಯವಿದೆಂದು ತೋರುತ್ತದೆ!

ತನ್ನ ಕೃತಿಯ ಒಳಗಡೆ ಕರ್ಣನನ್ನು ಪಂಪ ನೆನೆದಿರುವುದಕ್ಕೂ, ಅವನು ಬನವಾಸಿಯನ್ನು ನೆನೆದಿರುವುದಕ್ಕೂ ಸಂಬಂಧವಿರುವಂತಿದೆ. ಕರ್ಣನೂ ಬದುಕಿನ ಪ್ರವಾಹದಲ್ಲಿ ತಾಯಿಯಿಂದಲೇ ತ್ಯಕ್ತನಾಗಿ ಬಂದ ಮಗು. ಕರ್ಣನನ್ನು ನೆನೆಯುವುದೆಂದರೆ ಎಲ್ಲ ಅಗಲಿಕೆಗಳನ್ನೂ ಉತ್ಕಟವಾಗಿ ನೆನೆದಂತೆ! ತಬ್ಬಲಿತನವನ್ನೇ ನೆನೆದಂತೆ! ತಬ್ಬಲಿತನವನ್ನು ನೆನೆದಂತೆ ಕವಿಯ ಸೃಷ್ಟಿಶೀಲ ಪ್ರತಿಭೆ ಉಜ್ವಲಗೊಳ್ಳುವ ವಿಸ್ಮಯಕ್ಕೆ ಏನೆನ್ನೋಣ!

■ ತೋಷ

## ಮಾತೇ ಮುತ್ತು

★ ಮನುಷ್ಯನನ್ನು ಸೋಲಿಸಲಾಗದು, ಆದರೆ ಅವನನ್ನು ನಾಶ ಮಾಡಬಹುದು.

–ಅರ್ನೆಸ್ಟ್ ಹೆಮಿಂಗ್‌ವೇ

★ ಯುದ್ಧವು ಯಾರು ಸರಿ ಎನ್ನುವುದನ್ನು ಹೇಳುವುದಿಲ್ಲ; ಯಾರು ಉಳಿದಿದ್ದಾರೆ ಎನ್ನುವುದನ್ನು ಹೇಳುತ್ತದೆ.

–ಬರ್ಟ್ರೆಂಡ್ ರಸೆಲ್

★ ಅಂತಿಮವಾಗಿ ಎಲ್ಲವೂ ತಮಾಷೆಯೇ.

–ಚಾರ್ಲಿ ಚಾಪ್ಲಿನ್

★ ಶಾಂತ ಮನಸ್ಸು ನಿಮ್ಮ ಒಳಗನ್ನು ಗಟ್ಟಿಮಾಡಿ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ. ಅದು ಆರೋಗ್ಯಕ್ಕೂ ಒಳ್ಳೆಯದು.

–ದಲೈ ಲಾಮಾ

★ ಭಯವನ್ನು ಗೆಲ್ಲಬೇಕೆಂದಿದ್ದರೆ ಮನೆಯಲ್ಲಿ ಕುಳಿತು ಅದರ ಬಗ್ಗೆ ಯೋಚಿಸಬೇಡಿ. ಹೊರಗೆ ಹೋಗಿ ಕೆಲಸ ಮಾಡಿ.

–ಗೇಲ್ ಕಾರ್ನೆಗಿ

★ ಒಳ್ಳೆಯ ಐಡಿಯಾ ಮತ್ತು ಸಮರ್ಥ ಜನರಿದ್ದರೆ ಯೋಜನೆ ಖಂಡಿತಾ ವಿಫಲವಾಗುವುದಿಲ್ಲ. ಬ್ಯಾಂಕ್‌ನಲ್ಲಿ ಹಣ ಇಡುವುದಕ್ಕಿಂತ ಇದು ಒಳ್ಳೆಯದು.

–ಜಾನ್ ಬೆರ್ರಿ

★ ಹಣ ಹೇಗೆ ಗಳಿಸಬೇಕು ಎನ್ನುವುದು ಎಲ್ಲರಿಗೂ ಗೊತ್ತು. ಆದರೆ ಅದನ್ನು ಹೇಗೆ ಖರ್ಚು ಮಾಡಬೇಕು ಅನ್ನುವುದು ಲಕ್ಷದಲ್ಲಿ ಒಬ್ಬರಿಗಷ್ಟೇ ಗೊತ್ತು.

–ಬೆಂಜಮಿನ್ ಫ್ರಾಂಕ್ಲಿನ್